**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 510/2024</u>**

**ಪ್ರಾಸಾಃ- 2 ಚಾಸಾಃ- 2**

| | | |
|---|---|---|
| ಸಾಕ್ಷಿಯ ಹೆಸರು | : | ಕೃಷ್ಣಾ ನಾಯಕ್ |
| ತಂದೆಯ ಹೆಸರು | : | ತೂಕಾ ನಾಯಕ್ |
| ವಯಸ್ಸು | : | 48 ವರ್ಷ |
| ವೃತ್ತಿ | : | ಆಟೋ ಚಾಲಕ |
| ವಾಸಸ್ಥಳ | : | ಹೊನ್ನಳ್ಳಿ ತಾಂಡಾ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 8.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1 ಮತ್ತು 3 ರವರ ಪರಿಚಯ ಇದೆ. ದಿಃ 31-3-2024 ರಂದು ಪೋಲೀಸರು ನೋಟೀಸ್‌ನ್ನು ನೀಡಿ ನನಗೆ ಪಂಚನಾಮೆಗೆ ಬರುವಂತೆ ಕರೆದಿದ್ದರು. ಸದರಿ ನೋಟೀಸ್ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಚಾಸಾ 1 ರವರ ಮನೆಯ ಬಳಿ ಪಂಚನಾಮೆಗೆ ಕರೆದಿದ್ದರು. ಸದರಿ ಜಾಗೆಯಲ್ಲಿ ಆರೋಪಿತರು ಮನೆ ನಿರ್ಮಾಣ ಮಾಡುವ ಸಮಯದಲ್ಲಿ ಚಾಸಾ 1 ರವರ ಗೋಡೆ ಜಖಂ ಗೊಳಿಸಿದ್ದರು ಎಂದು ಗೊತ್ತಾಗಿತ್ತು. ಸದರಿ ಸ್ಥಳದಲ್ಲಿ ಪೋಲೀಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 12-00 ಗಂಟೆಯಿಂದ 1-00 ಗಂಟೆವರೆಗೆ ಮಾಡಿದ್ದರು. ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಿಪಿ-3 ರಂತೆ ಫೋಟೋ ತೆಗೆಸಿದ್ದರು. ನಿಪಿ-2 ರಲ್ಲಿ ನಾನು ನಂತರ ಪೋಲೀಸ್ ಠಾಣೆಗೆ ಬಂದು ಸಹಿ ಮಾಡಿದ್ದೆ. ನಿಪಿ-2 ರಲ್ಲಿ ಬರೆದ ಸಂಗತಿಗಳ ಬಗ್ಗೆ ಮಾಹಿತಿ ಇದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ವಿ ವಕೀಲರಿಂದಃ</u>**

ಚಾಸಾ 1, 4 ಮತ್ತು 5 ಮತ್ತು ನಾನು ಸಂಬಂಧಿಕರು ಎಂದರೆ ಸರಿಯಲ್ಲ. ನಾವು ಒಂದೇ ಕುಲಸ್ಥರು ಎಂದರೆ ಸರಿ. ನಾನು ಹೊನ್ನಳ್ಳಿ ತಾಂಡಾದಲ್ಲಿ ವಾಸ ಇದ್ದೇನೆ ಎಂದರೆ ಸರಿ. ಘಟನಾ ಸ್ಥಳದಿಂದ ಹೊನ್ನಳ್ಳಿ ತಾಂಡಾ ಸುಮಾರು

4-5 ಕಿ. ಮೀ. ದೂರ ಆಗುತ್ತದೆ ಎಂದರೆ ಸರಿ. ನಾನು ಆಟೋದಲ್ಲಿ ಹೊನ್ನಳ್ಳಿ ತಾಂಡಾದಿಂದ ಬಳ್ಳಾರಿಗೆ ಬೆಳಗಲ್ ಕ್ರಾಸ್‌ನಿಂದ ಬರುತ್ತೇನೆ ಎಂದರೆ ಸರಿ. ರಾಮಾಂಜಿನೇಯ ನಗರದಿಂದ ಬರುವುದಿಲ್ಲ ಎಂದರೆ ಸರಿ. ಚಾಸಾ 1 ರವರು ನನಗೆ ಮೊದಲಿನಿಂದ ಪರಿಚಯ ಎಂದರೆ ಸರಿಯಲ್ಲ. ಪೋಲೀಸರು ನನಗೆ ನೋಟೀಸ್‌ನ್ನು ಕೊಟ್ಟಿರಲಿಲ್ಲ. ಆ ದಿವಸ ನಾನು ಆಟೋದಲ್ಲಿ ರಾಮಾಂಜಿನೇಯ ನಗರಕ್ಕೆ ಬಂದಿದ್ದ ಸಮಯದಲ್ಲಿ ಪೋಲೀಸರು ನನ್ನನ್ನು ಕರೆಸಿ ಪಂಚನಾಮೆಗೆ ಸಹಿ ಮಾಡುವಂತೆ ಹೇಳಿ ಸಹಿ ತೆಗೆದುಕೊಂಡಿದ್ದರು. ನಾನು ಹೋಗಿದ್ದ ಸಮಯದಲ್ಲಿ ಅಲ್ಲಿ ಬಹಳಷ್ಟು ಜನ ಸೇರಿದ್ದರು. ಯಾರು ಯಾರು ಇದ್ದರು ಎಂದು ಗೊತ್ತಿಲ್ಲ. ಪೋಲೀಸರು ಸ್ಥಳದಲ್ಲಿ ಯಾವುದೇ ಬರವಣಿಗೆಯನ್ನು ಮಾಡಿರಲಿಲ್ಲ. ನನ್ನನ್ನು ಸ್ಥಳದಿಂದ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಟೈಪ್ ಮಾಡಿಸಿ ನನ್ನ ಸಹಿ ಪಡೆದುಕೊಂಡಿದ್ದರು. ಪೋಲೀಸ್ ಠಾಣೆಯಲ್ಲಿ ನನ್ನ ಜೊತೆ ಪಂಚನಾಮೆಗೆ ಬೇರೆ ಯಾರೂ ಸಹಿ ಮಾಡಿರಲಿಲ್ಲ. ದಿಃ 31-3-2024 ರಂದು ಮದ್ಯಾಹ್ನ 11-00 ರಿಂದ 1-00 ಗಂಟೆವರೆಗೆ ಪಂಚನಾಮೆಯನ್ನು ಮಾಡಿದ್ದರು. ಪೋಲೀಸರು ನನಗೆ ಮನೆಯ ವಿಚಾರವಾಗಿ ಗಲಾಟೆಯಾಗಿರುತ್ತದೆ. ಆದ್ದರಿಂದ ಪಂಚನಾಮೆ ಮಾಡುತ್ತಿದ್ದೇವೆ ಎಂದು ಹೇಳಿದ್ದರು. ಪಂಚನಾಮೆ ಮಾಡಿದಂತಹ ಸ್ಥಳದ ಮನೆ ನಂಬರ್ ಮತ್ತು ಅದರ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಪೋಲೀಸರು ಪಂಚನಾಮೆಯ ಸಂಗತಿಯನ್ನು ನನಗೆ ಓದಿ ಹೇಳಿದ್ದರು. ನಿಪಿ-3 ಪೋಟೋವನ್ನು ತೆಗೆದ ಪೋಲೀಸರ ಹೆಸರು ಗೊತ್ತಿಲ್ಲ. ಸದರಿ ಪೋಟೋದಲ್ಲಿ ಕಾಂಪೌಂಡ್ ಜಖಂ ಗೊಳಿದ ಬಗ್ಗೆ ಮತ್ತು ಮನೆ ನಾಶ ಪಡಿಸಿದ ಬಗ್ಗೆ ಕಾಣುತ್ತಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿದ್ದ ದಿವಸವೇ ನಿಪಿ-3 ಪೋಟೋ ತೆಗೆಸಿದ್ದರು. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡದೇ ಇದ್ದರೂ ಸಹ ನಾನು ಮತ್ತು ಚಾಸಾ 1 ಒಂದೇ ಕುಲಸ್ಥರು ಇರುವುದರಿಂದ ಚಾಸಾ 1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 510/2024</u>**

**ಪ್ರಾಸಾಃ- 3 ಚಾಸಾಃ- 3**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀನಿವಾಸುಲು |
| ತಂದೆಯ ಹೆಸರು | : | ರಾಮಾಂಜಿನೇಯ |
| ವಯಸ್ಸು | : | 55 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 8.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1 ಮತ್ತು 2 ರವರ ಪರಿಚಯ ಇದೆ. ದಿಃ 31-3-2024 ರಂದು ಪೋಲೀಸರು ನೋಟೀಸ್‌ನ್ನು ನೀಡಿ ನನಗೆ ಪಂಚನಾಮೆಗೆ ಬರುವಂತೆ ಕರೆದಿದ್ದರು. ಸದರಿ ನೋಟೀಸ್ ನೋಡುತ್ತಿದ್ದು ಅದನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಚಾಸಾ 1 ರವರ ಮನೆಯ ಬಳಿ ಪಂಚನಾಮೆಗೆ ಕರೆದಿದ್ದರು. ಸದರಿ ಜಾಗೆಯಲ್ಲಿ ಆರೋಪಿತರು ಮನೆ ನಿರ್ಮಾಣ ಮಾಡುವ ಸಮಯದಲ್ಲಿ ಚಾಸಾ 1 ರವರ ಗೋಡೆ ಜಖಂ ಗೊಳಿಸಿದ್ದರು ಎಂದು ಗೊತ್ತಾಗಿತ್ತು. ಸದರಿ ಸ್ಥಳದಲ್ಲಿ ಪೋಲೀಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮದ್ಯಾಹ್ನ 11-00 ಗಂಟೆಯಿಂದ 1-00 ಗಂಟೆವರೆಗೆ ಮಾಡಿದ್ದರು. ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಿಪಿ-3 ರಂತೆ ಪೋಟೋ ತೆಗೆಸಿದ್ದರು. ನಿಪಿ-2 ರಲ್ಲಿ ನಾನು ನಂತರ ಪೋಲೀಸ್ ಠಾಣೆಗೆ ಬಂದು ಸಹಿ ಮಾಡಿದ್ದೆ. ನಿಪಿ-2 ರಲ್ಲಿ ಬರೆದ ಸಂಗತಿಗಳ ಬಗ್ಗೆ ಮಾಹಿತಿ ಇದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ವಿ ವಕೀಲರಿಂದಃ</u>**

ನಾನು ಕಳೆದ 15 ವರ್ಷದಿಂದ ಬಿ ಬಿ ಹೆಚ್ ಎಸ್ ಶಾಲೆ, ಇಂದಿರಾ ನಗರದಲ್ಲಿ ಟೀಚರ್ ಆಗಿ ಕೆಲಸ ಮಾಡುತ್ತಿದ್ದೇನೆ. ಮುಂಜಾನೆ 9-30 ರಿಂದ ಸಂಜೆ 5-30 ರವರೆಗೆ

ನಮ್ಮ ಶಾಲೆಯ ಅವಧಿ ಇರುತ್ತದೆ. ಇಂದಿರಾ ನಗರದಿಂದ ರಾಮಾಂಜಿನೇಯ ನಗರ ಸುಮಾರು ಒಂದಾವರೆ ಇಂದ 2 ಕಿ. ಮೀ. ಆಗುತ್ತದೆ. ಸಾಕ್ಷಿಯು ಕೆಲಸ ಬಿಟ್ಟು 10 ವರ್ಷ ಆಗಿದೆ ಎಂದು ಹೇಳಿರುತ್ತಾರೆ. ನಾನು ಈಗ ಕೊರಿಯರ್ ಕೆಲಸ ಮಾಡುತ್ತೇನೆ. ಬಳ್ಳಾರಿ ಹೊಸ ಬಸ್ ನಿಲ್ದಾಣದ ಮುಂಭಾಗದಲ್ಲಿ ನಮ್ಮ ಕಚೇರಿ ಇದೆ. ನಾನು ಮುಂಜಾನೆ 12-00 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 6-00 ಗಂಟೆಗೆ ವಾಪಾಸ್ಸು ಬರುತ್ತೇನೆ. ಸಾಕ್ಷಿಯು ಸದರಿ ಕೆಲಸವನ್ನೂ ಸಹ ಬಿಟ್ಟಿದ್ದೇನೆ ಎಂದು ಹೇಳಿರುತ್ತಾರೆ. ಕೊರಿಯರ್ ಕೆಲಸವನ್ನು 1 ವರ್ಷದ ಹಿಂದೆ ಬಿಟ್ಟಿದ್ದೆ. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಚಾಸಾ 1 ಸಹ ಶಿಕ್ಷಕರು ಎಂದರೆ ಸರಿ. ಆದ್ದರಿಂದ ನನಗೆ ಚಾಸಾ 1 ರವರ ಪರಿಚಯ ಚೆನ್ನಾಗಿ ಇದೆ ಎಂದರೆ ಸರಿಯಲ್ಲ. ಚಾಸಾ 2 ರವರ ಪರಿಚಯ ಇಲ್ಲ. ನನ್ನ ಅತ್ತೆಯ ಮನೆ ರಾಮಾಂಜಿನೇಯ ನಗರದಲ್ಲಿ ಇದ್ದುದರಿಂದ ನಾನು ಆ ದಿವಸ ಅಲ್ಲಿಗೆ ಹೋಗಿದ್ದೆ. ಚಾಸಾ 1 ರವರ ಮನೆಯ ಮುಂದೆ ಜನ ಸೇರಿದ್ದನ್ನು ನೋಡಿ ಅಲ್ಲಿಗೆ ಹೋಗಿದ್ದೆ. ಆಗ ಪೋಲೀಸರು ನನ್ನನ್ನು ಪಂಚನಾಮೆಗೆ ಬರುವಂತೆ ಕರೆದಿದ್ದರು. ಪೋಲೀಸರು ನನಗೆ ಪಂಚನಾಮೆಗೆ ಬರುವಂತೆ ಹೇಳಿ ಮೊದಲು ಯಾವುದೇ ನೋಟೀಸ್‌ನ್ನು ಕೊಟ್ಟಿರಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಪೋಲೀಸರು ಮತ್ತು ಡಿ ವೈ ಎಸ್ ಪಿ ಮತ್ತು ಚಾಸಾ 1 ಇದ್ದರು. ನಾನು ಹೋದ ಸಮಯದಲ್ಲಿ ಅಲ್ಲಿ ಜಗಳ ನಡೆಯುತ್ತಿತ್ತು. ಪೋಲಿಸೀರು ಹೋಗಿದ್ದರಿಂದ ಜಗಳ ನಿಂತಿತ್ತು. ನಂತರ ಪಂಚನಾಮೆಯನ್ನು ಮಾಡಿದ್ದರು. ಪೋಲೀಸರು ಸ್ಥಳದಲ್ಲಿ ಕೈಯಿಂದ ಬರೆದುಕೊಂಡಿದ್ದರು. ಪೋಲೀಸರು ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದಿರಲಿಲ್ಲ. ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಟೈಪ್ ಮಾಡಿಸಿ ನನ್ನ ಸಹಿ ಪಡೆದುಕೊಂಡರು. ಸ್ಥಳದಲ್ಲಿ ಪಂಚನಾಮೆ ಮಾಡಿದಾಗ 12-00 ಗಂಟೆಯಾಗಿತ್ತು. ಪೋಲೀಸ್ ಠಾಣೆಗೆ 1-00 ಗಂಟೆಯ ನಂತರ ಹೋಗಿದ್ದೆವು. ಪೋಲೀಸ್ ಠಾಣೆಯಲ್ಲಿ ನನ್ನ ಸಹಿ ಪಡೆದು ನಂತರ ಪುನಃ ಸ್ಥಳಕ್ಕೆ ಬಂದು ಪೋಟೋ ತೆಗೆಸಿದ್ದರು. ನಂತರ ಪುನಃ ಠಾಣೆಗೆ ಕರೆದುಕೊಂಡು ಹೋಗಿ ನನ್ನ ಸಹಿಯನ್ನು ಪೋಟೋಗೆ ಪಡೆದುಕೊಂಡರು. ನಿಪಿ-3 ರಲ್ಲಿ ನನ್ನ ಸಹಿ ಇಲ್ಲ. ನಿಪಿ-3 ರಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ 1 ರವರ ಮನೆಯ ನಂಬರ್ ಮತ್ತು ಘಟನಾ ಸ್ಥಳದ ಚೆಕ್ಕು ಬಂದಿ ನನಗೆ ಗೊತ್ತಿಲ್ಲ.

ಚಾಸಾ 1 ಶಿಕ್ಷಕಾರಾಗಿರುವುದರಿಂದ ಮತ್ತು ಅವರು ನನಗೆ ಪರಿಚಯ ಇರುವುದರಿಂದ ನಾನು ಪಂಚನಾಮೆಗೆ ಹೋಗದೇ ಇದ್ದರೂ ಸಹ ಚಾಸಾ 1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ನಿಪಿ-2 ರಂತೆ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸರು ಘಟನಾ ಸ್ಥಳದಲ್ಲಿ ಹೇಳಿದ್ದನ್ನು ಮಾತ್ರ ಕೇಳಿಸಿಕೊಂಡಿದ್ದೆ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ:- 510/2024</u>**

**ಪ್ರಾಸಾ:- 4 ಚಾಸಾ:- 4**

| | | |
|---|---|---|
| ಸಾಕ್ಷಿಯ ಹೆಸರು | : | ರುಕ್ಮಿಣಿ ಬಾಯಿ |
| ಗಂಡನ ಹೆಸರು | : | ಹರಿಶ್ಚಂದ್ರ |
| ವಯಸ್ಸು | : | 72 ವರ್ಷ |
| ವೃತ್ತಿ | : | ಮನೆ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ:- 8.1.2026**

**ಮುಖ್ಯ ವಿಚಾರಣೆ: ವಿಶೇಷ ಅಭಿಯೋಜಕರಿಂದ**

ಚಾಸಾ 1 ಮತ್ತು 5 ನನ್ನ ಮಕ್ಕಳಾಗಬೇಕು. ಚಾಸಾ 6 ನನ್ನ ಮೊಮ್ಮಗನಾಗಬೇಕು. ನನಗೆ ಚಾಸಾ 7 ರಿಂದ 9 ರವರ ಪರಿಚಯ ಇಲ್ಲ. ಮನೆಯಲ್ಲಿ ನಾನು, ಚಾಸಾ 1, 5 ಮತ್ತು 6 ವಾಸ ಇರುತ್ತೇವೆ. ನಾವು ಲಂಬಾಣಿ ಜನಾಂಗಕ್ಕೆ ಸೇರಿದ್ದೇವೆ. ನನಗೆ ಆರೋಪಿತರ ಪರಿಚಯ ಇದೆ. ಅವರ ಮನೆ ನಮ್ಮ ಮನೆಯ ಹತ್ತಿರ ಇದೆ. ಆರೋಪಿತರು ನೇಕಾರ ಜನಾಂಗಕ್ಕೆ ಸೇರಿದ್ದಾರೆ. ಆರೋಪಿತರು ನಮ್ಮ ಮನೆಯ ಕಾಂಪೌಂಡ್ ಹೊಡೆದಿದ್ದಕ್ಕೆ ನಾವು ಕೇಸನ್ನು ಹಾಕಿದ್ದೆವು. ಆದ್ದರಿಂದ ಆರೋಪಿತರು ಸುಮಾರು 2 ವರ್ಷದ ಹಿಂದೆ ನಮ್ಮ ಮನೆಯ ಹತ್ತಿರ ಬಂದು ನನಗೆ ಮತ್ತು ಚಾಸಾ 5 ರವರಿಗೆ ಹೊಡೆದಿದ್ದರು ಮತ್ತು ನಮಗೆ ತಾಂಡಾ ಸೂಳೆಯರೇ ಎಂದು ಬೈದಿದ್ದರು. ನಾನು ಪ್ರಜ್ಞೆ ತಪ್ಪಿ ಕೆಳಗೆ ಬಿದ್ದೆ. ಚಾಸಾ 6 ಚಾಸಾ 1 ರವರಿಗೆ ಘಟನೆಗೆ ಬಗ್ಗೆ ತಿಳಿಸಿದ್ದರಿಂದ ಚಾಸಾ 1 ಸ್ಥಳಕ್ಕೆ ಬಂದು ಗಾಯಗೊಂಡಿದ್ದ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಳು. ಆರೋಪಿ 1 ರಿಂದ 3 ರವರು ನಮಗೆ ಬೈದು ಹೊಡೆದಿದ್ದರು. ಚಾಸಾ 7 ರಿಂದ 9 ರವರು ಸ್ಥಳಕ್ಕೆ ಬಂದು ನಮ್ಮನ್ನು ಆರೋಪಿತರಿಂದ ಬಿಡಿಸಿದ್ದರು. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ

ಕೊಟ್ಟಿದ್ದೇನೆ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದಾಗ ಮದ್ಯಾಹ್ನ ಸಮಯ ಸುಮಾರು 2-00 ಗಂಟೆ ಯಾಗಿತ್ತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ಆ ದಿವಸ ಆರೋಪಿತರು ನಮಗೆ ಅವರ ತಂಟೆಗೆ ಇನ್ನೊಮ್ಮೆ ಹೋದಲ್ಲಿ ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿ. ನಾವು ಹಾಕಿದ ಸಿವಿಲ್ ಕೇಸು ನಂಬರ್ ಗೊತ್ತಿಲ್ಲ, ಸಾಕ್ಷಿಯು ಆರೋಪಿ 3 ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 1 ಮತ್ತು 2 ಗೈರು ಹಾಜರು ಇದ್ದು ಇಪಿ ಸಲ್ಲಿಸಲಾಗಿದೆ. ಅವರ ಗುರುತಿನ ಬಗ್ಗೆ ತಕರಾರು ಇರುವುದಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ವಿ ವಕೀಲರಿಂದಃ</u>**

ಘಟನೆ ನಡೆದ ದಿವಸ ನನ್ನ ಮೊಮ್ಮಗ ಚಾಸಾ 6 ಶಾಲೆಗೆ ಹೋಗಿದ್ದ ಎಂದರೆ ಸರಿ. ಆತನ ಶಾಲೆ ಶನಿವಾರ ಮದ್ಯಾಹ್ನ 1-00 ಗಂಟೆಗೆ ಬಿಡುತ್ತದೆ. ಚಾಸಾ 6 ಈತನ ಬಳಿ ಫೋನ್ ಇಲ್ಲ. ನನ್ನ ಬಳಿ ಸಹ ಫೋನ್ ಇಲ್ಲ. ಕೀಪ್ಯಾಡ್ ಫೋನ್ ಇತ್ತು. ಅದು ಕೆಟ್ಟು ಹೋಗಿತ್ತು. ಚಾಸಾ 5 ರವರಿಗೆ ಕಣ್ಣು ಕಾಣುವುದಿಲ್ಲ. ಆದ್ದರಿಂದ ಅವಳೂ ಸಹ ಫೋನ್ ಉಪಯೋಗಿಸುವುದಿಲ್ಲ. ಆರೋಪಿ ಖರೀದಿ ಮಾಡಿದ ಜಾಗೆಯನ್ನು ಚಾಸಾ 1 ಖರೀದಿ ಮಾಡುವ ಉದ್ದೇಶ ಹೊಂದಿದ್ದಳು ಎಂದರೆ ಸರಿ. 1 ನೇ ಆರೋಪಿ ಸದರಿ ಜಾಗೆಯನ್ನು ತಾನೇ ಖರೀದಿಸುತ್ತೇನೆ ಎಂದು ಪೈಪೋಟಿಗೆ ಬಂದು ಅದನ್ನು ಖರೀದಿ ಮಾಡಿದ್ದ ಎಂದರೆ ಸರಿ. 1 ನೇ ಆರೋಪಿಯು ಜಾಗೆಯನ್ನು ಖರೀದಿಸಿ ಮನೆ ಕಟ್ಟಿದಾಗಿನಿಂದ ನಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ಸರಿ. ಆರೋಪಿತರು ಖರೀದಿ ಮಾಡಿದ ಜಾಗೆಯ ಚೆಕ್ಕುಬಂದಿ ಒಳಗೆ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಯ ಕಾಂಪೌಂಡ್ ನ್ನು ಹೊಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ

ಜಾಗೆಯನ್ನು ಅತಿ ಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜಾಗೆಯನ್ನು ಅತಿ ಕ್ರಮಣ ಮಾಡದೇ ಇದ್ದರೂ ಸಹ ನಾವು ಅವರ ವಿರುದ್ದ ಸುಳ್ಳು ಸಿವಿಲ್ ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ನಾವು ಸಲ್ಲಿಸಿದ ಸಿವಿಲ್ ಕೇಸು ಇನ್ನೂ ಇತ್ಯರ್ಥದಲ್ಲಿ ಇದೆ ಎಂದರೆ ಸರಿ. ಆರೋಪಿತರು ನಮ್ಮ ಜಾಗೆಯನ್ನು ಒತ್ತುವರಿ ಮಾಡಿದ ಬಗ್ಗೆ ನಾವು ಯಾವುದೇ ಸರ್ವೆ ಮಾಡಿಸಿಲ್ಲ. ಚಾಸಾ 1 ನನ್ನನ್ನು ಕರೆದುಕೊಂಡು ಹೋಗಿ ಸಿವಿಲ್ ದಾವೆ ಹಾಕಿಸಿದ್ದಳು ಎಂದರೆ ಸರಿ. ಈ ಪ್ರಕರಣದಲ್ಲಿ ಚಾಸಾ 1 ದೂರು ಕೊಟ್ಟಿದ್ದಾಳೆ. ಘಟನೆ ನಡೆದ ದಿವಸ ದೂರನ್ನು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಪ್ರಜ್ಞೆ ತಪ್ಪಿದ್ದರಿಂದ ಯಾವಾಗ ದೂರು ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳಿರುತ್ತಾರೆ. ನಾನು ಆ ದಿವಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಳು. ಚಾಸಾ 7 ರಿಂದ 9 ನನ್ನ ಮಗಳಿಗೆ ಮತ್ತು ನನಗೆ ಬಹಳ ಪರಿಚಯ ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ನನ್ನ ಮಗಳಿಗೆ ಜಾತಿ ಹಿಡಿದು ಬೈದಿಲ್ಲ ಮತ್ತು ಹೊಡೆದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ 7 ರಿಂದ 9 ಸ್ಥಳದಲ್ಲಿ ಇರಲಿಲ್ಲ ಮತ್ತು ಜಗಳ ಬಿಡಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆದು, ಬೈದು, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಅವರ ಆಸ್ತಿ ಹೊಡೆಯುವ ಉದ್ದೇಶದಿಂದ ನಾನು ಮತ್ತು ಚಾಸಾ 3 ಸೇರಿಕೊಂಡು ಸುಳ್ಳು ಕೇಸನ್ನು ಆರೋಪಿತರ ವಿರುದ್ದ ಹಾಕಿದ್ದೇವೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆಯನ್ನುಪಡೆದುಕೊಂಡಿದ್ದರು. ಯಾವ ದಿವಸ ಪಡೆದುಕೊಂಡಿದ್ದರು ಎಂದು ಗೊತ್ತಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 510/2024**

**ಪ್ರಾಸಾಃ- 5 ಚಾಸಾಃ- 5**

| | | |
|---|---|---|
| ಸಾಕ್ಷಿಯ ಹೆಸರು | : | ಸುಜಾತಾ ಬಾಯಿ |
| ತಂದೆಯ ಹೆಸರು | : | ಹರಿಶ್ಚಂದ್ರ ನಾಯಕ್ |
| ವಯಸ್ಸು | : | 47 ವರ್ಷ |
| ವೃತ್ತಿ | : | ಮನೆ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 8.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ನನ್ನ ತಂಗಿ. ಚಾಸಾ 4 ನನ್ನ ತಾಯಿ. ಚಾಸಾ 6 ನನ್ನ ತಂಗಿಯ ಮಗ. ಚಾಸಾ 7 ರಿಂದ 9 ರವರ ಪರಿಚಯ ಇಲ್ಲ. ನಾವು ಲಂಬಾಣಿ ಜನಾಂಗಕ್ಕೆ ಸೇರಿದ್ದೇವೆ. ನನಗೆ ಆರೋಪಿತರ ಪರಿಚಯ ಇದೆ. ಆರೋಪಿತರು ನೇಕಾರ ಜನಾಂಗಕ್ಕೆ ಸೇರಿದ್ದಾರೆ. ಆರೋಪಿತರು ನಮ್ಮ ಮನೆಯ ಪಕ್ಕದಲ್ಲಿ ಇರುವುದರಿಂದ ಅವರ ಪರಿಚಯ ಇದೆ. ನನಗೆ ಕಣ್ಣು ಕಾಣುವುದಿಲ್ಲ. ಆರೋಪಿತರ ಧ್ವನಿ ನನಗೆ ಪರಿಚಯ ಇದೆ. ಆರೋಪಿತರು ನಮ್ಮ ಮನೆಯ ಮುಂದೆ ಕೊಳಾಯಿ ಹಾಗೂ ಸಂಪ್ ನ್ನು ನಾಶ ಮಾಡಿರುತ್ತಾರೆ. ಸುಮಾರು 2 ವರ್ಷದ ಹಿಂದೆ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ಮದ್ಯಾಹ್ನ 3-00 ಗಂಟೆಗೆ ಬಂದು ಗಲಾಟೆ ಮಾಡಿರುತ್ತಾರೆ. ತಾಂಡಾ ಸೂಳೆ, ಕಂತ್ರಿ ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದರು ಮತ್ತು ಪ್ರಾಣ ಬೆದರಿಕೆ ಹಾಕಿದ್ದರು. ನಾನು ಜಗಳ ಬಿಡಿಸಲು ಹೋದಾಗ ಆರೋಪಿತರು ನನಗೂ ಸಹ ಹೊಡೆದಿದ್ದರು. ಸದರಿ ಜಗಳ ನಮ್ಮ ಮನೆಯ ಕಾಂಪೌಂಡ್ ಬಳಿ ಆಗಿತ್ತು. ಚಾಸಾ 6 ಚಾಸಾ 1 ರವರಿಗೆ ಪೋನ್ ಮಾಡಿದ್ದರಿಂದ ಚಾಸಾ 1 ಸ್ಥಳಕ್ಕೆ ಬಂದು ಗಾಯಗೊಂಡಿದ್ದ ನನ್ನನ್ನು ಮತ್ತು ಚಾಸಾ 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು

ಹೋಗಿದ್ದಳು. ನನ್ನ ತಲೆಗೆ ಮತ್ತು ಮೈ ಕೈಗೆ ಪೆಟ್ಟಾಗಿತ್ತು. ಯಾವ ದಿವಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ ಎಂದು ನನಗೆ ನೆನಪಿಲ್ಲ. ಪೋಲೀಸರು ನನ್ನನ್ನು ಘಟನೆಯ ಬಗ್ಗೆ ವಿಚಾರಿಸಿದ್ದರು. ( ಸಾಕ್ಷಿಗೆ ಕಣ್ಣು ಕಾಣುತ್ತಿಲ್ಲದ ಕಾರಣ ಚಾಸಾ 6 ರವರ ಜೊತೆ ನ್ಯಾಯಾಲಯದ ಒಳಗೆ ಬಂದಿರುತ್ತಾರೆ).

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ವಿ ವಕೀಲರಿಂದಃ</u>

ಚಾಸಾ 1 ಟೀಚರ್ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಾಸಾ 6 ಮುಂಜಾನೆ ಶಾಲೆಗೆ ಹೋಗಿ ಸಂಜೆ ಮನೆಗೆ ಬರುತ್ತಾನೆ. ಶನಿವಾರ ಮದ್ಯಾಹ್ನ 2-30 ರಿಂದ 3-00 ಗಂಟೆಗೆ ಮನೆಗೆ ಬರುತ್ತಾನೆ. ನನ್ನ ಬಳಿ ಯಾವುದೇ ಪೋನ್ ಇಲ್ಲ. ಪೋನ್ ಮಾಡುವ ಬಗ್ಗೆ ಚಾಸಾ 6 ಈತನಿಗೆ ಗೊತ್ತಿದೆ. ಚಾಸಾ 4 ರವರ ಬಳಿ ಪೋನ್ ಇಲ್ಲ. 1 ನೇ ಆರೋಪಿ ಖರೀದಿಸಿದ ಜಾಗೆಯನ್ನು ಚಾಸಾ 1 ಖರೀದಿಸಬೇಕೆಂದಿದ್ದಳು ಎಂದರೆ ಸರಿ. 1 ನೇ ಆರೋಪಿ ಪೈಪೋಟಿಯಿಂದ ಸದರಿ ಜಾಗೆಯನ್ನು ಖರೀದಿ ಮಾಡಿದ್ದ ಎಂದರೆ ಸರಿ. 1 ನೇ ಆರೋಪಿಯು ಸದರಿ ಜಾಗೆಯನ್ನು ಖರೀದಿ ಮಾಡಿದಾಗಿನಿಂದ ನಮ್ಮ ಮತ್ತು ಆರೋಪಿತರ ನಡುವೆ ವೈ ಮನಸ್ಸು ಇದೆ ಎಂದರೆ ಸರಿ. 1 ನೇ ಆರೋಪಿಯು ತಾನು ಖರೀದಿ ಮಾಡಿದ ಜಾಗೆಯಲ್ಲಿ ಮನೆ ಕಟ್ಟಿದ್ದಾನೆ ಎಂದರೆ ಸರಿ. 1 ನೇ ಆರೋಪಿಯು ನಮ್ಮ ಜಾಗೆಯಲ್ಲಿ ಅತಿ ಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿವಸ ನಾವು ದೂರನ್ನು ಕೊಟ್ಟಿದ್ದೇವೆ. ನಾವು ಆ ದಿವಸ ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯುಲ್ಲ. ಸುಮಾರು 8 ತಿಂಗಳ ನಂತರ ದೂರನ್ನು ಚಾಸಾ 1 ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಚಾಸಾ 1 ಏನು ದೂರಿನಲ್ಲಿ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ದಿವಸ ನನಗೆ ಯಾವುದೇ ಗಾಯಗಳು ಆಗಿರಲಿಲ್ಲ ಮತ್ತು ನಾನು ಎಲ್ಲಿಯೂ ಚಿಕಿತ್ಸೆ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ದಿವಸ ನನಗೆ, ಚಾಸಾ 1 ಮತ್ತು ಚಾಸಾ 4 ರವರಿಗ ಅವಾಚ ಶಬ್ದಗಳಿಂದ ಬೈದಿಲ್ಲ, ಜಾತಿನಿಂದನೆ ಮಾಡಿಲ್ಲ, ಹೊಡೆದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಮಾತನ್ನು ಕೇಳಿ ಆರೋಪಿತರು ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೋ

ಇಲ್ಲವೋಎಂದು ಗೊತ್ತಿಲ್ಲ. ಈ ದಿವಸ ನನ್ನ ತಂಗಿ ಸಹ ನ್ಯಾಯಾಲಯಕ್ಕೆ ಬಂದಿದ್ದಾಳೆ ಎಂದರೆ ಸರಿ. ನಾನು ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 7 ರಿಂದ 9 ನನಗೆ ಮತ್ತು ನನ್ನ ಸಹೋದರಿಗೆ ಬಹಳಷ್ಟು ಪರಿಚಯ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಯ ಬಳಿ ಯಾವತ್ತೂ ಬಂದಿರಲಿಲ್ಲ ಮತ್ತು ನಮಗೆ ಜಾತಿ ಹಿಡಿದು ಬೈದಿಲ್ಲ, ಹೊಡೆದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**